**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.28/2013**

| | | |
|---|---|---|
| ಸಾಕ್ಷಿದಾರರ ಹೆಸರು | : ಸುನೀಲ್ ಕುಮಾರ್ | ಪ್ರಾಸಾ-10 |
| ತಂದೆಯ ಹೆಸರು | : ತೇಜ್ ರಾಜ್ | ಚಾಸಾ-9 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಹಾರ | ದಿನಾಂಕಃ 17.10.2025 |
| ವಾಸಸ್ಥಳ | : ಮೈಸೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

3 ನೇ ಆರೋಪಿಯ ಪರಿಚಯ ನನಗಿದೆ. ಚಾಸಾ-10 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-24 ರಲ್ಲಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ.

ನಾನು ಸದರಿ ಸಹಿಯನ್ನು ದಿ.06.12.2011 ರಂದು ಬೆ.11.00 ರಿಂದ 12.00 ರ ಸಮಯದಲ್ಲಿ ಮೈಸೂರಿನ ಶ್ರೀರಾಮ್ ಪೇಟೆಯಲ್ಲಿರುವ ಮಹಾವೀರ ಬ್ಯಾಂಕರ್ ಅಂಗಡಿಯಲ್ಲಿ ಹಾಕಿರುತ್ತೇನೆ. ಸದರಿ ಸಹಿಯನ್ನು ಪೋಲಿಸರು 3 ನೇ ಆರೋಪಿಯು ನಮ್ಮ ಅಂಗಡಿಯಲ್ಲಿ ಒಡವೆಯನ್ನು ಅಡವಿಟ್ಟಿರುವ ಬಗ್ಗೆ ತಿಳಿಸಿದ ಮೇರೆಗೆ, ಸಹಿಯನ್ನು ಮಾಡಿರುತ್ತೇನೆ. ಆರೋಪಿಯು ನಮ್ಮ ಅಂಗಡಿಯಲ್ಲಿ 2 ಸರ, 2 ಜೊತೆ 36 ಗ್ರಾಂ ನ ಕಿವಿ ಓಲೆ, ಬೆಳ್ಳಿಯ 2 ಕಾಲು ಗೆಜ್ಜೆ, ಬೆಳ್ಳಿಯ 2 ಕಲುಂಗುರು ಸದರಿ ಒಡವೆಗಳನ್ನು ಆರೋಪಿಯು ನಮ್ಮ ಅಂಗಡಿಯಲ್ಲಿ ಅಡವಿಟ್ಟು ಹಣವನ್ನು ಪಡೆದುಕೊಂಡಿರುತ್ತಾನೆ. ನಾನು ಪೋಲಿಸರಿಗೆ ಎಲ್ಲಾ ಚಿನ್ನದ ಒಡವೆಯನ್ನು ಗಟ್ಟಿ ಮಾಡಿ ಒಟ್ಟು 88 ಗ್ರಾಂ ಚಿನ್ನವನ್ನು ಹಿಂತಿರುಗಿಸಿರುತ್ತೇನೆ ಮತ್ತು ಉಳಿದ ಬೆಳ್ಳಿಯ ಆಭರಣಗಳನ್ನು ಹಿಂತಿರುಗಿಸಿರುತ್ತೇನೆ. ನಂತರ ಪೋಲಿಸರು ಮಹಜರ್ ನ್ನು ಬರೆದಿರುತ್ತಾರೆ, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ಸಮಯದಲ್ಲಿ ಚಾಸಾ-7 ಮತ್ತು 8 ರವರು ನನ್ನ ಜೊತೆ ಸಹಿ ಮಾಡಿರುತ್ತಾರೆ.

**ಆರೋಪಿಗಳು ತಲೆಮರಸಿಕೊಂಡಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ**.,** ಮೂಡಿಗೆರೆ.